# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 915 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೀಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 24.08.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾತಿ ಕೊರತೆಯಿಂದಾಗಿ ಸ್ಥಳೀಯ ವಿದ್ಯಾರ್ಥಿಗಳಿಗೆ ಪ್ರವೇಶ ಪಡೆಯಲು ತೀವ್ರ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 21 ಮೆಟ್ರಿಕ್ ಪೂರ್ವ 63 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 84 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ವಿದ್ಯಾರ್ಥಿನಿಲಯಗಳಿಗೆ 2026-27ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ. |

| ವಿದ್ಯಾರ್ಥಿ ನಿಲಯ ವಿಧ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ಸ್ವೀಕೃತವಾದ ಅರ್ಜಿಗಳ ವಿವರ | ಪ್ರವೇಶ ಪಡೆದ ಅರ್ಜಿಗಳ ವಿವರ | | | ಬಾಕಿ ಉಳಿದ ಅರ್ಜಿಗಳ ವಿವರ |
|---|---|---|---|---|---|---|---|
| | | | | ನವೀಕರಣ | ಹೊಸದು | ಒಟ್ಟು | |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 21 | 1005 | 560 | 641 | 359 | 1000 | 201 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 63 | 8026 | 2145 | 4990 | 1446 | 6436 | 699 |
| **ಒಟ್ಟು** | **84** | **9031** | **2705** | **5631** | **1805** | **7436** | **900** |

ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 18 ಮೆಟ್ರಿಕ್ ಪೂರ್ವ ಹಾಗೂ 29 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 47 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ವಿದ್ಯಾರ್ಥಿನಿಲಯಗಳಿಗೆ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

| ವಿದ್ಯಾರ್ಥಿ ನಿಲಯ ವಿಧ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ಸ್ವೀಕೃತವಾದ ಅರ್ಜಿಗಳ ವಿವರ | ಪ್ರವೇಶ ಪಡೆದ ಅರ್ಜಿಗಳ ವಿವರ | | | ಬಾಕಿ ಉಳಿದ ಅರ್ಜಿಗಳ ವಿವರ |
|---|---|---|---|---|---|---|---|
| | | | | ನವೀಕರಣ | ಹೊಸದು | ಒಟ್ಟು | |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 18 | 990 | 583 | 587 | 365 | 952 | 218 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 29 | 4094 | 1654 | 2482 | 931 | 3413 | 723 |
| **ಒಟ್ಟು** | **47** | **5084** | **2237** | **3069** | **1296** | **4365** | **941** |

ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ಸರ್ಕಾರದ ಮಾರ್ಗಸೂಚಿಗಳ ಅನುಸಾರ ವಿದ್ಯಾರ್ಥಿ ನಿಲಯಗಳಲ್ಲಿ ಶೇ.50ರಷ್ಟು ಸ್ಥಾನಗಳನ್ನು ಸ್ಥಳೀಯ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಮೀಸಲಿರಿಸಿ SHP ಮುಖಾಂತರ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸಿ ನಂತರ ತಾಲ್ಲೂಕು ಮಟ್ಟದಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯ ಮೂಲಕ ವಿದ್ಯಾರ್ಥಿನಿಲಯಗಳ ಪ್ರವೇಶ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದ್ದು, ಪ್ರಸ್ತುತ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ನವೀಕರಣ ವಿದ್ಯಾರ್ಥಿಗಳಿಗೆ ಈಗಾಗಲೇ ಪ್ರವೇಶಾತಿ ಕಲ್ಪಿಸಲಾಗಿದ್ದು, ಹೊಸ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂಬಂಧ ಅರ್ಜಿ ಆಹ್ವಾನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಮುಂದುವರೆದು, ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸಿ ಪ್ರವೇಶಾತಿ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಅನುದಾನದ ಲಭ್ಯತೆಯನುಸಾರ ಮಾಸಿಕ ರೂ.1500/-ರಂತೆ 10 ತಿಂಗಳ ಅವಧಿಗೆ ರೂ.15000/-ಗಳನ್ನು ಮಂಜೂರು ಮಾಡಲಾಗುತ್ತದೆ.

ಆ) ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವಿದ್ಯಾರ್ಥಿ ನಿಲಯಗಳಲ್ಲಿ ಲಭ್ಯವಿರುವ ಒಟ್ಟು ಪ್ರವೇಶಾತಿ ಸಂಖ್ಯೆ ಎಷ್ಟು; ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಹಾಗೂ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪೈಕಿ ಸ್ಥಳೀಯ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

2023-24, 2024-25 ಹಾಗೂ 2025-26ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾತಿ ಕೋರಿ ಸ್ವೀಕೃತವಾದ ಅರ್ಜಿಗಳು ಹಾಗೂ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

**ದಕ್ಷಿಣ ಕನ್ನಡ ಜಿಲ್ಲೆ**

| ವಿದ್ಯಾರ್ಥಿ ನಿಲಯದ ವಿಧ | ಮಂಜೂರಾತಿ ಸಂಖ್ಯೆ | ಪ್ರವೇಶ ಕೋರಿ ಬಂದ ಅರ್ಜಿಗಳ ಸಂಖ್ಯೆ | | | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | | | ಬಾಕಿ ಉಳಿದ ಅರ್ಜಿಗಳ ವಿವರ |
|---|---|---|---|---|---|---|---|---|
| | | ಸ್ಥಳೀಯ ಜಿಲ್ಲೆ | ಹೊರ ಜಿಲ್ಲೆ | ಒಟ್ಟು | ಸ್ಥಳೀಯ ಜಿಲ್ಲೆ | ಹೊರ ಜಿಲ್ಲೆ | ಒಟ್ಟು | |
| | **2023-24** | | | | | | | |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 1100 | 238 | 786 | 994 | 238 | 756 | 994 | 0 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 6776 | 2790 | 5493 | 7283 | 2415 | 3758 | 6173 | 1110 |
| **ಒಟ್ಟು** | **7876** | **3028** | **6279** | **8277** | **2653** | **4514** | **7167** | **1110** |
| | **2024-25** | | | | | | | |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 1005 | 778 | 798 | 993 | 228 | 765 | 993 | 0 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 7426 | 3269 | 3843 | 7112 | 3219 | 3816 | 7035 | 77 |
| **ಒಟ್ಟು** | **8431** | **3497** | **4641** | **8105** | **3447** | **4581** | **8028** | **77** |
| | **2025-26** | | | | | | | |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 1005 | 250 | 777 | 1027 | 250 | 720 | 970 | 57 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 7726 | 3380 | 5696 | 9076 | 3135 | 4218 | 7353 | 1723 |
| **ಒಟ್ಟು** | **8731** | **3630** | **6473** | **10103** | **3385** | **4938** | **8323** | **1780** |

| ಉಡುಪಿ | | | | | | | | |
|---|---|---|---|---|---|---|---|---|
| ವಿದ್ಯಾರ್ಥಿ ನಿಲಯದ ವಿಧ | ಮಂಜೂರಾತಿ ಸಂಖ್ಯೆ | ಪ್ರವೇಶ ಕೋರಿ ಬಂದ ಅರ್ಜಿಗಳ ಸಂಖ್ಯೆ | | | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | | | ಬಾಕಿ ಉಳಿದ ಅರ್ಜಿಗಳ ವಿವರ |
| | | ಸ್ವಕೀಯ ಜಿಲ್ಲೆ | ಹೊರ ಜಿಲ್ಲೆ | ಒಟ್ಟು | ಸ್ವಕೀಯ ಜಿಲ್ಲೆ | ಹೊರ ಜಿಲ್ಲೆ | ಒಟ್ಟು | |
| | **2023-24** | | | | | | | |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 0990 | 28 | 970 | 998 | 26 | 876 | 902 | 96 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 3694 | 933 | 3194 | 4127 | 924 | 2505 | 3429 | 698 |
| **ಒಟ್ಟು** | **4684** | **961** | **4164** | **5125** | **950** | **3381** | **4331** | 794 |
| | **2024-25** | | | | | | | |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 990 | 43 | 930 | 973 | 40 | 891 | 931 | 42 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 3964 | 910 | 3720 | 4630 | 898 | 2874 | 3772 | 858 |
| **ಒಟ್ಟು** | **4954** | **953** | **4650** | **5603** | **938** | **3765** | **4703** | **900** |
| | **2025-26** | | | | | | | |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | 990 | 34 | 1253 | 1287 | 32 | 923 | 955 | 332 |
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | 4094 | 787 | 4221 | 5008 | 820 | 3051 | 3871 | 1137 |
| **ಒಟ್ಟು** | **5084** | **821** | **5474** | **6295** | **852** | **3974** | **4826** | **1469** |

| | | |
|---|---|---|
| ಇ) | ಉಭಯ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಸಮರ್ಪಕ ಅವಕಾಶ ದೊರೆಯುವಂತೆ ಪ್ರವೇಶಾತಿಯಲ್ಲಿ ಆದ್ಯತೆ ನೀಡಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ;<br>ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲು ಅಥವಾ ಈಗಿರುವ ವಿದ್ಯಾರ್ಥಿ ನಿಲಯಗಳ ಆಸನ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇದೆಯೇ; | 2025-26ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಲ್ಲಿ ತಲಾ 100 ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ.<br><br>2025-26ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಹೊಸದಾಗಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿದ್ದು, ಈ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಒಪ್ಪಿರುವುದಿಲ್ಲ.<br><br>ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ತಲಾ 50 ಸಂಖ್ಯಾಬಲದ ಮೆಟ್ರಿಕ್ ಪೂರ್ವ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>2026-27ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಲಾ 150 ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ಬಾಲಕರ ಹಾಗೂ ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿ ಪ್ರಾರಂಭಿಸಲಾಗಿದೆ.<br><br>ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸಿ ಪ್ರವೇಶಾತಿ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯಡಿ |

ಅನುದಾನದ ಲಭ್ಯತೆಯನುಸಾರ ಮಾಸಿಕ ರೂ.1500/-ರಂತೆ 10 ತಿಂಗಳ ಅವಧಿಗೆ ರೂ.15000/-ಗಳನ್ನು ಮಂಜೂರು ಮಾಡಲಾಗುತ್ತದೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯಾಬಲವನ್ನು ಹೆಚ್ಚಳ ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

**ಈ)** ರಾಜ್ಯದಲ್ಲಿರುವ ಒಟ್ಟು ವಿದ್ಯಾರ್ಥಿ ನಿಲಯಗಳೆಷ್ಟು; ಅವುಗಳಿಗೆ ಮಂಜೂರಾದ ವಿವಿಧ ವೃಂದದ ಒಟ್ಟು ಹುದ್ದೆಗಳೆಷ್ಟು ಮತ್ತು ಪ್ರಸ್ತುತ ಖಾಲಿಯಿರುವ ಒಟ್ಟು ಹುದ್ದೆಗಳು ಎಷ್ಟು; ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1243 ಮೆಟ್ರಿಕ್ ಪೂರ್ವ ಹಾಗೂ 1419 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 2712 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಮಂಜೂರಾದ ಹುದ್ದೆ, ಖಾಲಿಯಿರುವ ಹುದ್ದೆ ಹಾಗೂ ಭರ್ತಿಯಾಗಿರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಪದನಾಮ | ಮಂಜೂರು | ಭರ್ತಿ | ಖಾಲಿ |
|---|---|---|---|
| ನಿಲಯ ಪಾಲಕರು / ನಿಲಯ ಮೇಲ್ವಿಚಾರಕರು | 2712 | 1128 | 1584 |
| ಕಿರಿಯ ನಿಲಯ ಮೇಲ್ವಿಚಾರಕರು | 307 | 307 | 0 |
| ಅಡುಗೆಯವರು | 5751 | 3702 | 2049 |
| ಅಡುಗೆ ಸಹಾಯಕರು | 5473 | 948 | 4525 |
| ಕಾವಲುಗಾರರು | 1059 | 13 | 1046 |
| **ಒಟ್ಟು** | **15302** | **6098** | **9204** |

ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಮಂಜೂರಾದ ಹುದ್ದೆ, ಖಾಲಿಯಿರುವ ಹುದ್ದೆ ಹಾಗೂ ಭರ್ತಿಯಾಗಿರುವ ಹುದ್ದೆಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ.

- ಖಾಲಿ ಇರುವ 1584 ನಿಲಯ ಮೇಲ್ವಿಚಾರಕರ ಹುದ್ದೆಗಳ ಪೈಕಿ 396 ನಿಲಯ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.
- 732 ನಿಲಯ ಮೇಲ್ವಿಚಾರಕರ ಹುದ್ದೆ ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದ್ದು ಸದರಿ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ.
- ಖಾಲಿ ಇರುವ ಗ್ರೂಪ್ ಡಿ ಹುದ್ದೆಗಳಿಗೆ ಹೊರ ಸಂಪನ್ಮೂಲದಿಂದ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಂಡು ನಿಲಯಗಳ ನಿರ್ವಹಣೆ ಮಾಡಲಾಗುತ್ತಿರುತ್ತದೆ.

ಸಂಖ್ಯೆ:ಹಿಂವಕ **650** ಬಿಎಂಎಸ್ **2026**

**(ಶಿವರಾಜ್ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ. 915ಕ್ಕೆ ಅನುಬಂಧ.

| ಜಿಲ್ಲೆಯ ಹೆಸರು | ವಿದ್ಯಾರ್ಥಿನಿಲಯಗಳ ಸಂಖ್ಯೆ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | | | | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | | | | ಖಾಲಿ ಇರುವ ಹುದ್ದೆಗಳ ಸಂಖ್ಯೆ | | | |
|---|---|---|---|---|---|---|---|---|---|---|---|---|---|
| | | ನಿಲಯ ಪಾಲಕರು / ನಿಲಯ ಮೇಲ್ವಿಚಾರಕರು | ಅಡುಗೆಯವರು | ಅಡುಗೆ ಸಹಾಯಕರು | ಕಾವಲುಗಾರರು | ನಿಲಯ ಪಾಲಕರು / ನಿಲಯ ಮೇಲ್ವಿಚಾರಕರು | ಅಡುಗೆಯವರು | ಅಡುಗೆ ಸಹಾಯಕರು | ಕಾವಲುಗಾರರು | ನಿಲಯ ಪಾಲಕರು / ನಿಲಯ ಮೇಲ್ವಿಚಾರಕರು | ಅಡುಗೆಯವರು | ಅಡುಗೆ ಸಹಾಯಕರು | ಕಾವಲುಗಾರರು |
| ಬಾಗಲಕೋಟೆ | 92 | 92 | 210 | 202 | 33 | 57 | 148 | 64 | 0 | 35 | 62 | 138 | 33 |
| ಬಳ್ಳಾರಿ | 55 | 55 | 103 | 144 | 18 | 28 | 47 | 20 | 0 | 27 | 56 | 124 | 18 |
| ಬೆಳಗಾವಿ | 171 | 171 | 380 | 280 | 49 | 64 | 309 | 66 | 1 | 107 | 71 | 214 | 48 |
| ಬೆಂಗಳೂರು (ಗ್ರಾ) | 35 | 35 | 70 | 65 | 12 | 12 | 45 | 0 | 0 | 23 | 25 | 65 | 12 |
| ಬೆಂಗಳೂರು ನಗರ | 81 | 81 | 161 | 206 | 40 | 32 | 72 | 6 | 0 | 49 | 89 | 200 | 40 |
| ಬೀದರ್ | 78 | 78 | 193 | 134 | 23 | 33 | 124 | 13 | 2 | 45 | 69 | 121 | 21 |
| ಚಾಮರಾಜನಗರ | 34 | 34 | 56 | 86 | 15 | 14 | 38 | 20 | 0 | 20 | 18 | 66 | 15 |
| ಚಿಕ್ಕಬಳ್ಳಾಪುರ | 62 | 62 | 142 | 100 | 21 | 23 | 79 | 2 | 0 | 39 | 63 | 98 | 21 |
| ಚಿಕ್ಕಮಗಳೂರು | 103 | 103 | 242 | 155 | 50 | 40 | 128 | 4 | 0 | 63 | 114 | 151 | 50 |
| ಚಿತ್ರದುರ್ಗ | 109 | 109 | 197 | 279 | 41 | 43 | 147 | 18 | 0 | 66 | 50 | 261 | 41 |
| ದಕ್ಷಿಣ ಕನ್ನಡ | 84 | 84 | 205 | 150 | 47 | 25 | 71 | 1 | 1 | 59 | 134 | 149 | 46 |
| ದಾವಣಗೆರೆ | 91 | 91 | 162 | 231 | 40 | 23 | 79 | 66 | 2 | 68 | 83 | 165 | 38 |
| ಧಾರವಾಡ | 98 | 98 | 223 | 173 | 45 | 39 | 106 | 4 | 0 | 59 | 117 | 169 | 45 |
| ಗದಗ್ | 68 | 68 | 168 | 128 | 28 | 25 | 129 | 5 | 0 | 43 | 39 | 123 | 28 |
| ಹಾಸನ | 120 | 120 | 274 | 193 | 43 | 30 | 105 | 7 | 0 | 90 | 169 | 186 | 43 |
| ಹಾವೇರಿ | 85 | 85 | 185 | 138 | 31 | 36 | 136 | 36 | 0 | 49 | 49 | 102 | 31 |
| ಕಲಬುರಗಿ | 138 | 138 | 328 | 221 | 46 | 82 | 225 | 25 | 0 | 56 | 103 | 196 | 46 |
| ಕೊಡಗು | 42 | 42 | 76 | 89 | 18 | 7 | 46 | 0 | 0 | 35 | 30 | 89 | 18 |
| ಕೋಲಾರ | 61 | 61 | 120 | 153 | 23 | 20 | 75 | 8 | 0 | 41 | 45 | 145 | 23 |
| ಕೊಪ್ಪಳ | 90 | 90 | 173 | 221 | 37 | 57 | 111 | 30 | 0 | 33 | 62 | 191 | 37 |

| ಜಿಲ್ಲೆಯ ಹೆಸರು | ವಿದ್ಯಾರ್ಥಿನಿಲಯಗಳ ಸಂಖ್ಯೆ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | | | | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | | | | ಖಾಲಿ ಇರುವ ಹುದ್ದೆಗಳ ಸಂಖ್ಯೆ | | | |
|---|---|---|---|---|---|---|---|---|---|---|---|---|---|
| | | ನಿಲಯ ಪಾಲಕರು / ನಿಲಯ ಮೇಲ್ವಿಚಾರಕರು | ಅಡುಗೆಯವರು | ಅಡುಗೆ ಸಹಾಯಕರು | ಕಾವಲುಗಾರರು | ನಿಲಯ ಪಾಲಕರು / ನಿಲಯ ಮೇಲ್ವಿಚಾರಕರು | ಅಡುಗೆಯವರು | ಅಡುಗೆ ಸಹಾಯಕರು | ಕಾವಲುಗಾರರು | ನಿಲಯ ಪಾಲಕರು / ನಿಲಯ ಮೇಲ್ವಿಚಾರಕರು | ಅಡುಗೆಯವರು | ಅಡುಗೆ ಸಹಾಯಕರು | ಕಾವಲುಗಾರರು |
| ಮಂಡ್ಯ | 116 | 116 | 215 | 278 | 40 | 55 | 128 | 13 | 2 | 61 | 87 | 265 | 38 |
| ಮೈಸೂರು | 116 | 116 | 219 | 281 | 41 | 60 | 133 | 15 | 2 | 56 | 86 | 266 | 39 |
| ರಾಯಚೂರು | 74 | 74 | 141 | 175 | 26 | 33 | 109 | 31 | 0 | 41 | 32 | 144 | 26 |
| ರಾಮನಗರ | 53 | 53 | 96 | 126 | 19 | 12 | 56 | 14 | 0 | 41 | 40 | 112 | 19 |
| ಶಿವಮೊಗ್ಗ | 141 | 141 | 340 | 248 | 70 | 60 | 135 | 2 | 1 | 81 | 205 | 246 | 69 |
| ತುಮಕೂರು | 123 | 123 | 277 | 208 | 46 | 47 | 143 | 3 | 0 | 76 | 134 | 205 | 46 |
| ಉಡುಪಿ | 47 | 47 | 110 | 79 | 25 | 12 | 71 | 11 | 0 | 35 | 39 | 68 | 25 |
| ಉತ್ತರ ಕನ್ನಡ | 105 | 105 | 226 | 153 | 45 | 28 | 150 | 1 | 0 | 77 | 76 | 152 | 45 |
| ವಿಜಯನಗರ | 68 | 68 | 129 | 178 | 26 | 36 | 94 | 9 | 0 | 32 | 35 | 169 | 26 |
| ವಿಜಯಪುರ | 105 | 105 | 204 | 242 | 38 | 63 | 141 | 103 | 2 | 42 | 63 | 139 | 36 |
| ಯಾದಗಿರಿ | 67 | 67 | 126 | 157 | 23 | 32 | 92 | 40 | 0 | 35 | 34 | 117 | 23 |
| **ಒಟ್ಟು** | **2712** | **2712** | **5751** | **5473** | **1059** | **1128** | **3702** | **948** | **13** | **1584** | **2049** | **4525** | **1046** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು